ಕರ್ನಾಟಕ ಸರ್ಕಾರ

ಸಂಖ್ಯೆ:ಡಿಟಿಇ/ಕೌಜ್ಞಾಗಂ/2019-20/633

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560 001
ದಿನಾಂಕ:29-06-2019

**-: ಸುತ್ತೋಲೆ :-**

ವಿಷಯ: ಉನ್ನತ ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿನ ರಾಜ್ಯದ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ /ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಉದ್ಯೋಗ ಆಧಾರಿತ ಶಿಕ್ಷಣ ಒದಗಿಸುವ "ಕೌಶಲ್ಯ ಜ್ಞಾನ ಗಂಗಾ" ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ: ಇಡಿ 195 ಟಿಇಸಿ 2018, ಬೆಂಗಳೂರು, ದಿನಾಂಕ:11-06-2019.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಆದೇಶದಲ್ಲಿ, ರಾಜ್ಯದಲ್ಲಿ ನವ ಉದ್ದಿಮೆದಾರರನ್ನು ಸೃಜಿಸಿ, ಕೈಗಾರಿಕೆಗಳಿಗೆ ಬೇಕಾದ ನುರಿತ ಕಾರ್ಯಪಡೆಗಳನ್ನು ಸಿದ್ಧಪಡಿಸಿ, ನಿರುದ್ಯೋಗ ಸಮಸ್ಯೆ ಕಡಿತಗೊಳಿಸಲು ವಿದ್ಯಾರ್ಥಿಗಳಲ್ಲಿ ಉದ್ಯೋಗಾಧಾರಿತ ಕೌಶಲ್ಯ ಹೆಚ್ಚಿಸಿ, ನವ ಉದ್ದಿಮೆದಾರರನ್ನು ಸೃಜಿಸುವ ದೃಷ್ಟಿಯಿಂದ, 2019-20ನೇ ಸಾಲಿಗೆ ಜಾರಿಗೆ ಬರುವಂತೆ ಉನ್ನತ ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿನ ರಾಜ್ಯದ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ / ಇಂಜಿನಿಯರಿಂಗ್ ಕಾಲೇಜುಗಳಲ್ಲಿ 1. ಮಾಹಿತಿ ಸಂವಹನ, 2. ಕೌಶಲ್ಯಾಭಿವೃದ್ಧಿ(ಮೃದು ಹಾಗೂ ಕಠಿಣ),3. ಉದ್ದಿಮೆದಾರತೆ, 4. ಸಲಹಾ ಕೇಂದ್ರ 5. ಉದ್ಯೋಗ ಕೋಶ, ಈ 5 ಆಯಾಮಗಳಲ್ಲಿ ಸಮಗ್ರವಾಗಿ ಜ್ಞಾನ ಮತ್ತು ಕೌಶಲ್ಯ ಒಳಗೊಂಡ ತರಬೇತಿಯನ್ನು ನೀಡುವ ಹಾಗೂ ಉದ್ಯೋಗ ಆಧಾರಿತ ಶಿಕ್ಷಣ ಒದಗಿಸುವ "ಕೌಶಲ್ಯ ಜ್ಞಾನ ಗಂಗಾ" ಕೇಂದ್ರಗಳನ್ನು ಸ್ಥಾಪಿಸಿ, "ಕೌಶಲ್ಯ ಜ್ಞಾನ ಗಂಗಾ" ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಬಗ್ಗೆ ಕಾರ್ಯಕಾರಿ ನಿರ್ದೇಶಕರು, ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ ಇವರಿಗೆ ಅನುಮತಿಸಿ ಆದೇಶಿಸಲಾಗಿದೆ.

ತತ್ಸಂಬಂಧ, 2019-20ನೇ ಸಾಲಿಗೆ ಜಾರಿಗೆ ಬರುವಂತೆ ಉನ್ನತ ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿನ ರಾಜ್ಯದ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ / ಇಂಜಿನಿಯರಿಂಗ್ ಕಾಲೇಜುಗಳಲ್ಲಿ "ಕೌಶಲ್ಯ ಜ್ಞಾನ ಗಂಗಾ" ಕೇಂದ್ರಗಳನ್ನು ಸ್ಥಾಪಿಸಿ, ಜ್ಞಾನ ಮತ್ತು ಕೌಶಲ್ಯ ಒಳಗೊಂಡ ತರಬೇತಿಯನ್ನು ನೀಡುವ ಹಾಗೂ ಉದ್ಯೋಗ ಆಧಾರಿತ ಶಿಕ್ಷಣ ಒದಗಿಸುವ ಸಲುವಾಗಿ ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ಸೂಚಿಸಿರುವ ಮಾರ್ಗಸೂಚಿ ಹಾಗೂ ಮಾನದಂಡಗಳನ್ನು ಪಾಲಿಸಬೇಕೆಂದು ಹಾಗೂ ಕಾರ್ಯಕಾರಿ ನಿರ್ದೇಶಕರು, ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ ಇವರ ಸಹಯೋಗದೊಂದಿಗೆ "ಕೌಶಲ್ಯ ಜ್ಞಾನ ಗಂಗಾ" ಕಾರ್ಯಕ್ರಮವನ್ನು ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸಲು ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಸರ್ಕಾರದ ಪತ್ರದಲ್ಲಿ ತಿಳಿಸಿರುವಂತೆ ಅಗತ್ಯ ಪೂರ್ವಭಾವಿ ಸಿದ್ಧತೆಗಳನ್ನು ಮಾಡಿಕೊಳ್ಳಬೇಕೆಂದು ಹಾಗೂ ಮಾಡಿಕೊಂಡಿರುವ ಪೂರ್ವಭಾವಿ ಸಿದ್ಧತೆಗಳ ಬಗ್ಗೆ ಮಾಹಿತಿಯನ್ನು ಈ ಕೆಳಕಂಡ ಲಿಂಕ್‌ನಲ್ಲಿರುವ ಗೂಗಲ್ ಫಾರಂನಲ್ಲಿ ದಿನಾಂಕ: 11-07-2019ರೊಳಗಾಗಿ ಭರ್ತಿ ಮಾಡಿ ಸಲ್ಲಿಸಲು ರಾಜ್ಯದ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ / ಇಂಜಿನಿಯರಿಂಗ್ ಕಾಲೇಜುಗಳ ಪ್ರಾಚಾರ್ಯರುಗಳಿಗೆ ಈ ಮೂಲಕ ಸೂಚಿಸಲಾಗಿದೆ.

Google form link to send information

ನಿರ್ದೇಶಕರು

ಇವರಿಗೆ:

1. ರಾಜ್ಯದ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ / ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ಇ-ಆಡಳಿತ ವಿಭಾಗ, ತಾಂ.ಶಿ.ನಿ, ಬೆಂಗಳೂರು ಡಿಟಿಇ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಉನ್ನತ ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿನ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹಾಗೂ ಸರ್ಕಾರಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಉದ್ಯೋಗ ಆಧಾರಿತ ಶಿಕ್ಷಣ ಒದಗಿಸುವ **"ಕೌಶಲ್ಯ ಜ್ಞಾನ ಗಂಗಾ"** ಕಾರ್ಯಕ್ರಮವನ್ನು ಅನುಷ್ಠಾನೊಳಸುವ ಬಗ್ಗೆ.

**ಓದಲಾಗಿದೆ:**

1. 2018-19ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವ ಕಂಡಿಕೆ 59.
2. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಪತ್ರ ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್-24/2018-19, ದಿನಾಂಕ:14-08-2018.
3. 2019-20ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವ ಕಂಡಿಕೆ 126.

**ಪ್ರಸ್ತಾವನೆ:-**

ಮೇಲೆ (1)ರಲ್ಲಿ ಓದಲಾದ, 2018-19ನೇ ಸಾಲಿನ ಜುಲೈ ಮಾಹೆಯಲ್ಲಿ ಮಂಡಿಸಲಾದ ಆಯವ್ಯಯ ಭಾಷಣದ ಕಂಡಿಕೆ-59ರಲ್ಲಿ ಪದವಿ ಪೂರ್ವ ಮತ್ತು ಪದವಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ NEET/JEE ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ, ಉನ್ನತ ವ್ಯಾಸಂಗಕ್ಕೆ ಮತ್ತು ಉದ್ಯೋಗ ಪಡೆಯಲು ಅಗತ್ಯವಾದ ತರಬೇತಿಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಮಾಹಿತಿ ಸಂವಹನ ತಂತ್ರಜ್ಞಾನ (ಐ.ಸಿ.ಟಿ) ಬಳಸಿ ನೀಡಲಾಗುವುದು ಎಂದು ಘೋಷಿಸಲಾಗಿದೆ.

ಮೇಲೆ (2)ರಲ್ಲಿ ಓದಲಾದ ಪ್ರಸ್ತಾವನೆಯಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು "Capacity Building Program for Students of Karnataka" ಎಂಬ ಒಂದು ಹೊಸ ಯೋಜನೆಯನ್ನು ತಯಾರಿಸಿದ್ದು, ಇದರ ಮೂಲಕ ವಿದ್ಯಾರ್ಥಿಗಳ ಬಲವರ್ಧನೆಗೊಳಸುವುದು, ತರಬೇತಿ ಹಾಗೂ ಮಾರ್ಗದರ್ಶನದ ಮೂಲಕ ವೃತ್ತಿಪರ ಅರ್ಹತೆಯನ್ನು ಸಾಧಿಸುವುದು, ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಜಾಗೃತಿ ಮೂಡಿಸುವುದು, ಕರ್ನಾಟಕ ಗ್ರಾಮೀಣ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ಸಾಮರ್ಥ್ಯವನ್ನು ಹೆಚ್ಚಿಸುವುದು, ಪದವಿ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಕಾರ್ಯಕ್ರಮದ ಪಕ್ಷಿ ನೋಟವನ್ನು ಕಳುಹಿಸುತ್ತಾ ಅನುಮೋದನೆ ನೀಡಲು ಕೋರಿದ್ದಾರೆ.

ಮೇಲೆ (3)ರಲ್ಲಿ ಓದಲಾದ 2019-20ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-126ರಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅನುಕೂಲವಾಗುವ ತರಬೇತಿ ಸೇರಿದಂತೆ ವಿದ್ಯಾರ್ಥಿಗಳಿಗೆ ಸ್ವಾವಲಂಬಿಗಳನ್ನಾಗಿ ಮಾಡುವ ಮತ್ತು ಉದ್ಯೋಗ ದೊರಕಿಸಿಕೊಡುವ ಕೌಶಲ್ಯಾಧಾರಿತ ಶಿಕ್ಷಣ ನೀಡಲು 2018-19ನೇ ಸಾಲಿನ 2 ವರ್ಷಗಳ ಆಯವ್ಯಯ ಘೋಷಣೆಗಳನ್ನು ಸೇರಿಸಿ, ಸಮಗ್ರವಾಗಿ ಉದ್ಯೋಗಾಧಾರಿತ ಶಿಕ್ಷಣ ನೀಡುವ ದೃಷ್ಟಿಯಿಂದ **"ರಾಜ್ಯದ ಎಲ್ಲಾ ಪ್ರಥಮ ದರ್ಜೆ ಕಾಲೇಜುಗಳು, ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಹಾಗೂ ವಿಶ್ವವಿದ್ಯಾಲಯಗಳಲ್ಲಿ ಉದ್ಯೋಗ ಆಧಾರಿತ ಶಿಕ್ಷಣ ನೀಡಲು ತರಬೇತಿ ಕೇಂದ್ರಗಳನ್ನು ತೆರೆಯಲಾಗುವುದು. ಇದರಿಂದ ರಾಜ್ಯದ ವಿದ್ಯಾರ್ಥಿಗಳಿಗೆ ಉದ್ಯೋಗ ಅವಕಾಶಗಳು ಹೆಚ್ಚಾಗುತ್ತದೆ"** ಎಂದು ಘೋಷಿಸಲಾಗಿದೆ.

ಮೇಲ್ಕಂಡ ಅಂಶಗಳನ್ನು ಆಧರಿಸಿ, ರಾಜ್ಯದಲ್ಲಿ ನವ ಉದ್ದಿಮೆದಾರರನ್ನು ಸೃಜಿಸಿ, ಕೈಗಾರಿಕೆಗಳಿಗೆ ಬೇಕಾದ ನುರಿತ ಕಾರ್ಯಪಡೆಗಳನ್ನು ಸಿದ್ಧಪಡಿಸಿ, ನಿರುದ್ಯೋಗ ಸಮಸ್ಯೆ ಕಡಿತಗೊಳಸಲು ವಿದ್ಯಾರ್ಥಿಗಳಲ್ಲಿ ಉದ್ಯೋಗಾಧಾರಿತ ಕೌಶಲ್ಯ ಹೆಚ್ಚಿಸಿ ನವ ಉದ್ದಿಮೆದಾರರನ್ನು ಸೃಜಿಸುವ ದೃಷ್ಟಿಯಿಂದ ಉನ್ನತ ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿನ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹಾಗೂ ಸರ್ಕಾರಿ ತಾಂತ್ರಿಕ ಶಿಕ್ಷಣ

2ಕ್ಕೆ

ಸಂಸ್ಥೆಗಳಲ್ಲಿ ಕೌಶಲ್ಯ ಜ್ಞಾನ ಗಂಗಾ ಕೇಂದ್ರಗಳನ್ನು ಸ್ಥಾಪಿಸಿ ತನ್ಮೂಲಕ 1. ಮಾಹಿತಿ ಸಂವಹನ, 2.ಕೌಶಲ್ಯಾಭಿವೃದ್ಧಿ (ಮೃದು ಹಾಗೂ ಕಠಿಣ), 3. ಉದ್ದಿಮೆದಾರತೆ, 4. ಸಲಹಾ ಕೇಂದ್ರ, 5. ಉದ್ಯೋಗ ಕೋಶ, ಈ 5 ಆಯಾಮಗಳಲ್ಲಿ ಸಮಗ್ರವಾಗಿ ಜ್ಞಾನ ಮತ್ತು ಕೌಶಲ್ಯ ಒಳಗೊಂಡ ತರಬೇತಿಯನ್ನು ನೀಡುವ ಹಾಗೂ ಉದ್ಯೋಗ ಆಧಾರಿತ ಶಿಕ್ಷಣ ಒದಗಿಸುವ **"ಕೌಶಲ್ಯ ಜ್ಞಾನ ಗಂಗಾ"** ಕಾರ್ಯಕ್ರಮವನ್ನು ಅನುಷ್ಠಾನೊಳಿಸುವುದು ಅಗತ್ಯವೆಂದು ಸರ್ಕಾರ ಮನಗಂಡಿದೆ.

**ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.**

**ಸರ್ಕಾರದ ಆದೇಶ ಸಂಖ್ಯೆ: ಇಡಿ 195 ಟಿಇಸಿ 2018, ಬೆಂಗಳೂರು, ದಿನಾಂಕ: 11.06.2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2019-20ನೇ ಸಾಲಿಗೆ ಜಾರಿಗೆ ಬರುವಂತೆ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹಾಗೂ ಸರ್ಕಾರಿ ಪಾಲಿಟೆಕ್ನಿಕ್ / ಇಂಜಿನಿಯರಿಂಗ್ ಕಾಲೇಜುಗಳಲ್ಲಿ, 1.ಮಾಹಿತಿ ಸಂವಹನ, 2.ಕೌಶಲ್ಯಾಭಿವೃದ್ಧಿ (ಮೃದು ಹಾಗೂ ಕಠಿಣ), 3. ಉದ್ದಿಮೆದಾರತೆ, 4. ಸಲಹಾ ಕೇಂದ್ರ, 5. ಉದ್ಯೋಗ ಈ 5 ಆಯಾಮಗಳಲ್ಲಿ ಸಮಗ್ರವಾಗಿ ಜ್ಞಾನ ಮತ್ತು ಕೌಶಲ್ಯ ಒಳಗೊಂಡ ತರಬೇತಿಯನ್ನು ನೀಡುವ ಹಾಗೂ ಉದ್ಯೋಗ ಆಧಾರಿತ ಶಿಕ್ಷಣ ಒದಗಿಸುವ **"ಕೌಶಲ್ಯ ಜ್ಞಾನ ಗಂಗಾ"** ಕೇಂದ್ರಗಳನ್ನು ಸ್ಥಾಪಿಸಿ, ಅನುಷ್ಠಾನಗೊಳಿಸಲು ಪೂರ್ವ ಸಿದ್ದತೆಗಳನ್ನು ಮಾಡಿಕೊಳ್ಳಲು ಕಾರ್ಯಕಾರಿ ನಿರ್ದೇಶಕರು, ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ ಇವರಿಗೆ ಅನುಮತಿಸಿ ಆದೇಶಿಸಿದೆ.

1. **ಕೌಶಲ್ಯ ಜ್ಞಾನ ಗಂಗಾ ಕೇಂದ್ರಗಳ ಸ್ಥಾಪನೆ:** ರಾಜ್ಯದ ಪ್ರತಿಯೊಂದು ವಿಶ್ವವಿದ್ಯಾಲಯ, ಸರ್ಕಾರಿ ಪಾಲಿಟೆಕ್ನಿಕ್, ಇಂಜಿನಿಯರಿಂಗ್ ಕಾಲೇಜು ಹಾಗೂ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಒಂದು ಪ್ರತ್ಯೇಕ ಕೊಠಡಿಯನ್ನು ಕೌಶಲ್ಯ ಜ್ಞಾನ ಗಂಗಾ ಕೇಂದ್ರಕ್ಕಾಗಿ ಸಿದ್ಧಪಡಿಸುವುದು. ಪ್ರಾಥಮಿಕವಾಗಿ ಈ ಕೇಂದ್ರಗಳಲ್ಲಿ ವಿದ್ಯುದ್ದೀಕರಣ, ಕುರ್ಚಿ, ಮೇಜು ಇತ್ಯಾದಿ ಅಗತ್ಯ ಪೀಠೋಪಕರಣಗಳನ್ನು ಒದಗಿಸುವುದು. ಒಟ್ಟಾರೆ 523 ಕೇಂದ್ರಗಳಿಗೆ ಪೂರ್ವ ಸಿದ್ಧತೆಗಾಗಿ ಕೇಂದ್ರ ಒಂದಕ್ಕೆ ಗರಿಷ್ಠ ರೂ.1.15 ಲಕ್ಷಗಳನ್ನು ನಿಯಮಾನುಸಾರ ಬಳಸುವುದು. ಪೂರ್ವಸಿದ್ಧತೆಗಾಗಿ ಅಗತ್ಯವಿರುವ ರೂ.600.00 ಲಕ್ಷಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ತಿಗೆ ಬಿಡುಗಡೆ ಮಾಡುವುದು.

2. ಈ ಕಾರ್ಯಕ್ರಮಕ್ಕೆ ಅಗತ್ಯವಿರುವ ಪ್ರೊಜೆಕ್ಟರ್, ಲ್ಯಾಪ್‌ಟಾಪ್, ಸ್ಪೀಕರ್‌ಗಳು, ಸ್ವೀಕೃತ ಕೇಂದ್ರಕ್ಕೆ ಅಗತ್ಯವಿರುವ ಉಪಗ್ರಹ ಸಂಪರ್ಕ ಉಪಕರಣಗಳು, ಪಠ್ಯ, ತರಬೇತಿ ಸಂಚಿಕೆ, ಇತ್ಯಾದಿಗಳನ್ನು ಒದಗಿಸಲು ಹಾಗೂ ಪ್ರಸಾರ / ಸ್ವೀಕೃತಿ ಕೇಂದ್ರಗಳ ನಿರ್ವಹಣೆ, ಕಾರ್ಯಾಚರಣೆ ಬಗ್ಗೆ ಸವಿವರ ಮಾರ್ಗಸೂಚಿಗಳನ್ನೊಳಗೊಂಡ ಆದೇಶವನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

3. ಕಾರ್ಯಕ್ರವನ್ನು ಸಮರ್ಪಕವಾಗಿ, ಪರಿಣಾಮಕಾರಿಯಾಗಿ ಉದ್ದೇಶಿತ ಗುರಿಗಳನ್ನು ನಿಗಧಿತ ಸಮಯದಲ್ಲಿ ಈಡೇರಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಚಾಲನ ಸಮಿತಿಯನ್ನು ರಚಿಸಲಾಗುವುದು.

4. ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳಲ್ಲಿರುವ ಸ್ಥಾನಿಕ ಕೋಶ ಹಾಗೂ ಸಲಹಾ ಕೋಶದ ಜವಾಬ್ದಾರಿ ಹೊಂದಿರುವ ಪ್ರಾಧ್ಯಾಪಕರನ್ನೇ ಈ ಕಾರ್ಯಕ್ರಮಕ್ಕೆ ನೋಡಲ್ ಅಧಿಕಾರಿಗಳನ್ನಾಗಿ ನೇಮಿಸುವುದು. ಇವರಿಗೆ ಹೆಚ್ಚುವರಿಯಾಗಿ ಮಾಹೆಯಾನ ರೂ.5000/- ದಂತೆ ಗೌರವ ಸಂಭಾವನೆಯನ್ನು ನೀಡುವುದು.

5. ಮೇಲುಸ್ತುವಾರಿ, ಕಛೇರಿ ವೆಚ್ಚ, ಇತರೆ ಸಾದಿಲ್ವಾರು ವೆಚ್ಚಗಳಿಗಾಗಿ ತಲಾಕೇಂದ್ರಕ್ಕೆ ವಾರ್ಷಿಕ ರೂ.20000/- ಗಳನ್ನು ಒದಗಿಸಲಾಗುವುದು.

6. ಅಂತಿಮ ವರ್ಷದ ವಿದ್ಯಾರ್ಥಿಗಳು ಈ ಕಾರ್ಯಕ್ರಮದ ಫಲಾನುಭವಿಗಳಾಗಿದ್ದು, ಇದಕ್ಕೆ ಸಂಬಂಧಿಸಿದ ಮಾರ್ಗಸೂಚಿ, ಪಠ್ಯ ವಿಷಯ ಹಾಗೂ ತರಬೇತಿ ಸಾಹಿತ್ಯವನ್ನು ಸಿದ್ಧಪಡಿಸಿ

3ಕ್ಕೆ

ವಿತರಿಸಲಾಗುವುದು. ಈ ತರಬೇತಿಯಿಂದ ರಾಜ್ಯದ ವಿದ್ಯಾರ್ಥಿಗಳಲ್ಲಿ ಉದ್ಯೋಗಾಧಾರಿತ ಕೌಶಲ್ಯ ಹೆಚ್ಚಿಸಿ, ನವ ಉದ್ದಿಮೆದಾರರನ್ನು ಸೃಜಿಸಿ, ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆಯನ್ನು ಕಡಿತಗೊಳಿಸಿ, ಎಲ್ಲಾ ವರ್ಗದ ಯುವ ಜನರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮವು ಯಶಸ್ವಿಯಾಗಿ ಅನುಷ್ಠಾನಗೊಳಿಸುವುದು.

7. ಕಾರ್ಯಕ್ರಮ ಪ್ರಚಾರಕ್ಕೆ ಉನ್ನತ ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸ್ಟುಡಿಯೋಗಳನ್ನು ಬಳಸಿಕೊಳ್ಳುವುದು. ಎಲ್ಲಾ ಕೌಶಲ್ಯ ಜ್ಞಾನ ಗಂಗಾ ಕೇಂದ್ರಗಳು ಸ್ವೀಕೃತ ಕೇಂದ್ರಗಳಾಗಿರುವಂತೆ ದ್ವಿಮುಖ ಆಡಿಯೋ ಮತ್ತು ವೀಡಿಯೋ ಇರುವಂತೆ ಇಂಟರ್‍ಯಾಕ್ಟಿವ್ ಮಾದರಿಯಲ್ಲಿ ಸಿದ್ಧಪಡಿಸುವುದು.

8. ಈ ಕಾರ್ಯಕ್ರಮಕ್ಕೆ ಅಗತ್ಯವಿರುವ ಪಠ್ಯಕ್ರಮವನ್ನು ಪ್ರಚಲಿತ ಉದ್ದಿಮೆದಾರರು. ಕೈಗಾರಿಕೋದ್ಯಮಿಗಳು, ವಾಣಿಜ್ಯೋದ್ಯಮಿಗಳು, ಶಿಕ್ಷಣ ತಜ್ಞರೊಂದಿಗೆ ಸಭೆ ನಡೆಸಿ ಸಿದ್ಧಪಡಿಸಿ ಪ್ರಸಾರ ಮಾಡಲು ಕ್ರಮವಹಿಸಲು ಅಗತ್ಯ ಪ್ರಸ್ತಾವನೆ ಸಲ್ಲಿಸುವುದು.

9. ಈ ತರಗತಿಗಳನ್ನು ಕಾಲೇಜುಗಳ ಶೈಕ್ಷಣಿಕ ವೇಳಾಪಟ್ಟಿಯೊಂದಿಗೆ ಮೇಳವಿಸಿ ನಡೆಸುವುದು.

10. ಪ್ರಸ್ತುತ ಎಲ್ಲಾ ಕಾಲೇಜುಗಳಲ್ಲಿ ಲಭ್ಯವಿರುವ ಪ್ರತ್ಯೇಕ ಕೊಠಡಿಯಲ್ಲಿ ಕೌಶಲ್ಯ ಜ್ಞಾನ ಗಂಗಾ ತರಬೇತಿ ಕೇಂದ್ರಕ್ಕೆ ಅವಶ್ಯವಿರುವ ತಂತ್ರಜ್ಞಾನ ಒಳಗೊಂಡಂತೆ ಅಗತ್ಯವಿರುವ ಸೌಕರ್ಯಗಳನ್ನು ಒದಗಿಸುವುದು.

11. ಕಾಲೇಜು ಶಿಕ್ಷಣ/ತಾಂತ್ರಿಕ ಶಿಕ್ಷಣ ಇಲಾಖೆಗಳಲ್ಲಿರುವ ಜಂಟಿ ನಿರ್ದೇಶಕರ ಮೇಲುಸ್ತುವಾರಿಯಲ್ಲಿ ಎಲ್ಲಾ ಕಾಲೇಜುಗಳ ಸಂಯೋಜನೆಯನ್ನು ಮಾಡುವುದು.

12. ಈ ಯೋಜನೆಯು ವಾರ್ಷಿಕವಾಗಿ ನಿಗಧಿಯಾಗಿದ್ದು, ಪ್ರತಿ ವರ್ಷವು ಉದ್ಯೋಗ ಮತ್ತು ಉದ್ದಿಮೆ ಮಾರುಕಟ್ಟೆ ಬೇಡಿಕೆಗೆ ಅನುಗುಣವಾಗಿ ಪಠ್ಯಕ್ರಮ ಬದಲಾವಣೆಯೊಂದಿಗೆ ನಿರಂತರವಾಗಿ ಮುಂದುವರೆಸಲಾಗುವುದು.

ಈ ಆದೇಶವನ್ನು ಯೋಜನಾ ಇಲಾಖೆಯು ಟಿಪ್ಪಣಿ ಸಂಖ್ಯೆ: ಯೋಇ/82/ಜಶ/2018, ದಿನಾಂಕ:27.11.2018ರಲ್ಲಿ ಹಾಗೂ ದಿನಾಂಕ:25.02.2019ರಲ್ಲಿ ನೀಡಿದ ಸಹಮತಿಯನ್ವಯ ಹಾಗೂ ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಆಇ/1178/ವೆಚ್ಚ-8/2018, ದಿನಾಂಕ:11.12.2018ರಲ್ಲಿ ನೀಡಿದ ಸಹಮತಿಯನ್ವಯ ಹಾಗೂ ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: 146/ವೆಚ್ಚ-8/2019, ದಿನಾಂಕ:14.03.2019ರಲ್ಲಿ ನೀಡಿದ ಅಭಿಪ್ರಾಯದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

11/6/19

**(ಮನೋರಮ ಡಿ.ಸಿ.)**
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ).

<u>**ಗೆ,**</u>

1. ಪ್ರಧಾನ ಮಹಾಲೇಖಪಾಲರು, ಬೆಂಗಳೂರು, ಕರ್ನಾಟಕ.
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಕುಲಸಚಿವರುಗಳು (ಉಪ ಕಾರ್ಯದರ್ಶಿಗಳು ವಿಶ್ವವಿದ್ಯಾಲಯ ಇವರ ಮುಖಾಂತರ).
4. ಕಾರ್ಯಕಾರಿ ನಿರ್ದೇಶಕರು, ಕರ್ನಾಟಕ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು.

4ಕ್ಕೆ

5. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ. ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಕಟ್ಟಡ, ಬೆಂಗಳೂರು.ಇವರ ಆಪ್ತ ಕಾರ್ಯದರ್ಶಿಗಳು.
8. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಮಲ್ಲೇಶ್ವರಂ, ಬೆಂಗಳೂರು.
9. ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 7&8), ವಿಧಾನಸೌದ, ಬೆಂಗಳೂರು.
10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 7&8), ವಿಧಾನಸೌದ, ಬೆಂಗಳೂರು.
11. ನಿರ್ದೇಶಕರು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಕಟ್ಟಡ, ಬೆಂಗಳೂರು.
12. ಮಾನ್ಯ ಉನ್ನತ ಶಿಕ್ಷಣ ಸಚಿವರ ರವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
13. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ರವರ ಆಪ್ತ ಕಾರ್ಯದರ್ಶಿರವರಿಗೆ.
14. ಶಾಖಾಧಿಕಾರಿ, ಉನ್ನತ ಶಿಕ್ಷಣ ಇಲಾಖೆ (ಯೋಜನೆ), ಬಹುಮಹಡಿ ಕಟ್ಟಡ, ಬೆಂಗಳೂರು.
15. ಶಾಖಾ ರಕ್ಷಾಕಡತ / ಹೆಚ್ಚುವರಿ ಪ್ರತಿ.